**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2143/2022**

ಚಾ.ಸಾ–03, ಫ್ರಾ.ಸಾ–02

| | | |
|---|---|---|
| ಹೆಸರು | : | ನಾಗರಾಜು |
| ತಂದೆಯ ಹೆಸರು | : | ಪುಟ್ಟಮಾದನಾಯಕ |
| ವಯಸ್ಸು | : | 30 ವರ್ಷ |
| ವೃತ್ತಿ | : | ಕೂಲಿಕೆಲಸ |
| ವಾಸ | : | ನಾಗಲಗೆರೆ ಗ್ರಾಮ,<br>ತಿ.ನರಸೀಪುರ ತಾಲ್ಲೂಕು |

**ದಿನಾಂಕ 20.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಕಳೆದ ಎರಡು ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ತಿ. ನರಸೀಪುರ ಪಟ್ಟಣದ ತಿರುಮಕೂಡಲಿನಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದ ಬಳಿ ಪೊಲೀಸರು ಪಂಚನಾಮವನ್ನು ಜರುಗಿಸಿದ್ದು, ಆ ವೇಳೆಗೆ ನಾನು ಮತ್ತು ಫ್ರಾಸಾ–1 ರವರು ಹಾಜರಿದ್ದು, ಪೊಲೀಸರು ನನ್ನ ಸಹಿಯನ್ನು ಪಂಚನಾಮಕ್ಕೆ ಪಡೆದಿರುತ್ತಾರೆ. ಸದರಿ ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಆ ಪಂಚನಾಮ ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

ಸ್ಥಳದಲ್ಲಿ ಆ ದೇವಸ್ಥಾನದ ಕಿಟಕಿಗಳು ಮತ್ತು ಆ ದೇವಸ್ಥಾನದ ಬಾಗಿಲಿನ ಬೀಗಗಳು ಬಿದ್ದಿದ್ದವು. ಅದೇ ರೀತಿ ಆ ದೇವಸ್ಥಾನದ ಹುಂಡಿ ಪಕ್ಕದಲ್ಲಿ ಬಿದ್ದಿತ್ತು. ಜೊತೆಗೆ ಒಂದು ಟೋಪಿ ಬಿದ್ದಿತ್ತು.

ಆ ಕಿಟಕಿ, ಬೀಗ ಮತ್ತು ಟೋಪಿಯನ್ನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಎಂ.ಒ.1 ರಿಂದ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಆರ್. ಆರೋಪಿತರ ಪರ ವಕೀಲರಿಂದ :**

ಫ್ರಾಸಾ–1 ರವರು ವಾಸಿಸುವ ತಿರುಮಕೂಡಲಿನಲ್ಲಿ ನಾನು ಕೂಡ ವಾಸವಾಗಿದ್ದೇನೆ ಎಂದರೆ ಸರಿ. ಪೊಲೀಸರ ಹೇಳಿಕೆ ಮೇರೆಗೆ ಪಂಚನಾಮಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ಎಂ.ಒ.1 ರೀತಿಯ ಕಿಟಕಿ ಮತ್ತು ಎಂ.ಒ.2 ರೀತಿಯ ಬೀಗವು ಗುಜರಿಯಲ್ಲಿ ದೊರೆಯುತ್ತದೆ ಎಂದರೆ ಸರಿ. ಪಂಚನಾಮದ ವಿವರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಹಾಗಾಗಿ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ.ನರಸೀಪುರ**